(ಇಂದು ದಿನಾಂಕಃ 27-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ಪರ ಶ್ರೀ. ಎಮ.ಎಸ.ಎಸ ವಕೀಲರಿಂದ ಃ**

1. ನಾನು ನನ್ನ ಮುತ್ತಜ್ಜನಾದ ಸಕ್ರು ನಾಯಕರವರನ್ನು ನಾನು ನೋಡಿಲ್ಲ. ಸಕ್ರುನಾಯಕರವರಿಗೆ 6 ಜನ ಮಕ್ಕಳು. ಸಕ್ರು ನಾಯಕರವರ 6 ಜನ ಮಕ್ಕಳ ಹೆಸರು ಲಚ್ಚುನಾಯಕ,ತುಳಸಿರಾಮ, ಗಂಗುನಾಯಕ, ಚಂದುನಾಯಕ, ಹಣುಮನಾಯಕ ರಾಮಸಿಂಗ, ಎಂದು ಹೇಳುತ್ತಾರೆ. ಸಕ್ರುನಾಯಕರವರಿಗೆ ಒಟ್ಟು ಎಷ್ಟು ಸರ್ವೆ ನಂಬರಗಳ ಆಸ್ತಿಗಳು ಇದ್ದವು ಎಂರದೆ ಸಾಕ್ಷಿ 2 ಸರ್ವೆ ನಂಬರ ಇದ್ದವು ಎಂದು ಹೇಳುತ್ತಾರೆ. ಅದರ ಸರ್ವೆ ನಂಬರ 90 ಮತ್ತು 92 ಇರುತ್ತದೆ. ಲಚ್ಚುನಾಯಕ, ತುಳಸಿರಾಮ,ಗಂಗುನಾಯಕ, ಚಂದುನಾಯಕ, ಹಣುಮನಾಯಕ ರಾಮಸಿಂಗರವರು ಬೇರೆ ಆಗಿರುತ್ತಾರೆ. ಸರ್ವೆ ನಂಬರ 90 ಮತ್ತು 92 ಈ ಆರು ಜನರು ವಿಭಾಗ ಮಾಡಿಕೊಂಡಿರುತ್ತಾರೆ. ತುಳಜಾನಾಯಕ ನನ್ನ ಅಜ್ಜ ಇರುತ್ತಾರೆ. ಸರ್ವೆ ನಂಬರ 92 ರಲ್ಲಿ 2 ಎಕರೆ ಮತ್ತು ಸರ್ವೆ ನಂಬರ 90 ರಲ್ಲಿ 5 ಎಕರೆ ಬಂದಿದೆ ಎಂದು ಹೇಳುತ್ತಾರೆ. ತುಳಜಾನಾಯಕರವರಿಗೆ ವಿಭಾಗದಲ್ಲಿ ಸರ್ವೆ ನಂಬರ 92 ರಲ್ಲಿ 2 ಎಕರೆ ಮತ್ತು ಸರ್ವೆ ನಂಬರ 90 ರಲ್ಲಿ 5 ಎಕರೆ ಬಂದಿದೆ ಎಂದು ನಾನು ಹೇಳುತ್ತಿದ್ದು ಆ ಪ್ರಕಾರ ಅವರ ಹೆಸರಿಗೆ ಮ್ಯುಟೇಷನ ಆಗಿದೆಯಾ ಎಂದರೆ ಆಗಿದೆ ಎಂದು ಹೇಳುತ್ತಾರೆ. ತುಳಜಾನಾಯಕರವರಿಗೆ ರಾಮಲು ಮತ್ತು ಶಂಕರ ಎಂಬ ಇಬ್ಬರು ಮಕ್ಕಳು. ರಾಮಲು ಮತ್ತು ರಾಮಲುವಿಭಾಗ ಮಾಡಿಕೊಂಡಿರುತ್ತಾರೆ. ರಾಮಲು ಮತ್ತು ಶಂಕರ ವಿಭಾಗ ಮಾಡಿಕೊಂಡಿದ್ದು ಅವರವರ ಹೆಸರಿಗೆ ಮ್ಯುಟೇಷನ ಆಗಿದೆ ಎಂದರೆ ಸರಿ. ಸರ್ವೆ ನಂಬರ 90 ಮತ್ತು 92 ರಲ್ಲಿ ರಾಮಲು ಎಷ್ಟು ಜಮೀನು ಬಂದಿದೆ ಮತ್ತು

ಶಂಕರವರಿಗೆ ಎಷ್ಟು ಜಮೀನು ಬಂದಿದೆ ಎಂದರೆ ಸಾಕ್ಷಿ ಎಕರೆ ಗುಂಟೆ ಎಷ್ಟು ಎಂದು ನನಗೆ ಗೊತ್ತಿಲ್ಲ, ಇಬ್ಬರಿಗು ಸಮಾನವಾಗಿ ಬಂದಿದೆ ಎಂದು ಹೇಳುತ್ತಾರೆ. ಸರ್ವೆ ನಂಬರ 90 ರಲ್ಲಿ 5 ಎಕರೆ ಇದ್ದು ರಾಮಲು ಮತ್ತು ಶಂಕರವರಿಗೆ 5 ಎಕರೆಯಲ್ಲಿ ಇಬ್ಬರಿಗು ಸಮಾನವಾಗಿ ಬಂದಿದೆ ಎಂದು ಹೇಳುತ್ತಾರೆ. ರಾಮಲು ಮತ್ತು ಶಂಕರವರ ಹೆಸರಿಗೆ ಪಹಣಿ ಆಗಿದೆಯಾ ಎಂದರೆ ಸಾಕ್ಷಿ ಆಗಿರುತ್ತದೆ ಎಂದು ಹೇಳುತ್ತಾರೆ. ಶಂಕರವರ ಹೆಸರಿಗೆ ಸರ್ವೆ ನಂಬರ 90/3 ಆಗಿದೆ ಎಂದರೆ ಸರಿ. ಸರ್ವೆ ನಂಬರ 90/4 ತನ್ನ ತಂದೆಯ ಹೆಸರಿಗೆ ಆಗಿದೆ ಎಂದರೆ ಸರಿ. ಸರ್ವೆ ನಂಬರ 90 ರ ಫಾರಂ ನಂಬರ 10 ನ್ನು ನಾನು ಈ ದಾವೆ ಸಲ್ಲಿಸಿದ್ದಾಗ ನೋಡಿರುತ್ತೇನೆ. ಫಾರಂ ನಂಬರ 10 ಯಾವ ಇಸವಿಯಲ್ಲಿ ತಯ್ಯಾರಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ 90 ರಲ್ಲಿ ಒಟ್ಟು ಎಷ್ಟು ಹಿಸ್ಸೆಗಳು ಇವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ 90 ರಲ್ಲಿ ನನಗೆ ಹಾಗೂ ನನ್ನ ಚಿಕ್ಕಪ್ಪ ಶಂಕರವರಿಗೆ ಬಂದ ಜಮೀನು ಕೆನಲ್ ಅಡಿಯಲ್ಲಿ ಮುಳುಗಡೆ ಆಯಿತು ಎಂದರೆ ಸರಿ. ಅದರ ಪರಿಹಾರದ ಹಣ ನಾನು ಮತ್ತು ನನ್ನ ಚಿಕ್ಕಪ್ಪ ಶಂಕರ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಅಣ್ಣ ತಮ್ಮಂದಿರು ಬೇರೆ ಬೇರೆ ಆಗಿರುತ್ತೇವೆ. ಪಾಂಡು ನನ್ನ ತಮ್ಮ ಇರುತ್ತಾನೆ. ಈಗಾಗಲೆ ಪಾಂಡು ತನ್ನ ಸಾಕ್ಷಿ ಕೊಟ್ಟಿರುತ್ತಾನೆ ಎಂದರೆ ಸರಿ. ಪಾಂಡು ತನ್ನ ಸಾಕ್ಷಿಯಲ್ಲಿ ಪರಿಹಾರದ ಹಣ ನಾನು ಮತ್ತು ನನ್ನ ಚಿಕ್ಕಪ್ಪ ಶಂಕರ ಪಡೆದುಕೊಂಡಿರುತ್ತಾರೆ ಅಂತಾ ಹೇಳಿರುತ್ತಾರೆ ಎಂದರೆ ಸರಿ. ರೂ.11,84,247/- ನಾವೆಲ್ಲ ಅಣ್ಣ ತಮ್ಮಂದಿರು ತೆಗೆದುಕೊಂಡಿಲ್ಲ ಎಂದರೆ ಸಾಕ್ಷಿ ನಾನು ತಪ್ಪಾಗಿ ಪಡೆದುಕೊಂಡಿದ್ದು ಅದು ನನ್ನ ಅಣ್ಣ ತಮ್ಮಂದಿರಿಗೆ ಬರೆದುಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಆ ಹಣವನ್ನು ನಾನು ರುಪಸಿಂಗರವರಿಗೆ

ಕೊಟ್ಟಿರುತ್ತೇನೆ. ಆ ಹಣವನ್ನು ನಾನು ರುಪಸಿಂಗರವರಿಗೆ ಕೊಟ್ಟಿರುತ್ತೇನೆ ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ರೂ.11,84,247/-ಹಣವನ್ನು ನಾನು ರುಪಸಿಂಗರವರಿಗೆ ಕೊಟ್ಟಿರುತ್ತೇನೆ ಎಂದು ದಾವೆಯಲ್ಲಿ ಹೇಳಿಲ್ಲ ಎಂದರೆ ಸರಿ. ಸರ್ವೆ ನಂಬರ 90 ರ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ 90 ರಲ್ಲಿ ಒಟ್ಟು 14 ಹಿಸ್ಸೆಗಳು ಇರುತ್ತವೆ ಆದರೆ ಪಹಣಿ 9 ಇರುತ್ತವೆ. ಸಕ್ರುನಾಯಕರವರ 6 ಜನ ಮಕ್ಕಳು ಬೇರೆ ಬೇರೆ ಆಗಿರುತ್ತಾರೆ. ಸಕ್ರುನಾಯಕರವರ 6 ಜನ ಮಕ್ಕಳಿಗೆ ಯಾವ ಸರ್ವೆ ನಂಬರ ಜಮೀನಿನಲ್ಲಿ ಎಷ್ಟು ಎಕರೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಫಾರಂ ನಂಬರ 10 ಆಗಿದೆ ಎಂದು ನಾನು ಹೇಳುತ್ತಿದ್ದು ಪಹಣಿ ಮತ್ತು ಫಾರಂ ನಂಬರಗೆ ತಾಳೆ ಆಗುತ್ತಿತ್ತು ಅಥವಾ ಇಲ್ಲವೊ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 90 ರ ಫಾರಂ ನಂಬರ 10 ನ್ನು ಈ ದಾವೆ ಸಲ್ಲಿಸುವ 4 ತಿಂಗಳ ಮೊದಲು ನಾನು ನೋಡಿದ್ದೆ. ಫಾರಂ ನಂಬರ 10 ರಲ್ಲಿ ನನಗೆ 3 ಹಿಸ್ಸೆ ಬಂದಿತ್ತು. ಫಾರಂ ನಂಬರ 10 ನ್ನು ನಾನು ನೋಡಿದ ನಂತರ ಪಹಣಿ ತೆಗೆದುಕೊಂಡು ನೋಡಿರುತ್ತೇನೆ. ಪಹಣಿ ಹಾಗೂ ಫಾರಂ ನಂಬರ 10 ತಾಳೆ ಆಗುತ್ತಿರಲಿಲ್ಲ. ಫಾರಂ ನಂಬರ 10 ರಲ್ಲಿ ಹಿಸ್ಸಾ ನಂಬರ 1 ಇದ್ದು ಅದು ಈಗ ಹಿಸ್ಸಾ ನಂಬರ 6 ಎಂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಫಾರಂ ನಂಬರ 10 ರಲ್ಲಿ ಹಿಸ್ಸಾ ನಂಬರ 2 ಇದ್ದು ಅದು ಈಗ ಹಿಸ್ಸಾ ನಂಬರ 5 ಎಂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಹಿಸ್ಸಾ ನಂಬರ 6 ರಲ್ಲಿ ಚಂದುನಾಯಕರವರ ಪಾಲಿಗೆ ಬಂದ ಜಮೀನು ಅವರ ಮಕ್ಕಳ ಹೆಸರಿಗೆ ಪಹಣಿ ಆಗಿದೆ ಎಂದರೆ ಸಾಕ್ಷಿ ಅದು ತಪ್ಪಾಗಿ ಆಗಿದೆ ಎಂದು ಹೇಳುತ್ತಾರೆ. ಫಾರಂ ನಂಬರ 10 ರಲ್ಲಿ ಹಿಸ್ಸಾ ನಂಬರ 3 ಇದ್ದು ಅದು ಈಗ ಹಿಸ್ಸಾ ನಂಬರ 8 ಎಂದು ಆಗಿದೆ ಎಂದರೆ ಸರಿ, ಅದು ರೇವು ಚಂಗುರವರ

ಹೆಸರಿಗೆ ಪಹಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಫಾರಂ ನಂಬರ 10 ರಲ್ಲಿ ಹಿಸ್ಸಾ ನಂಬರ 4 ಇದ್ದು ಅದು ಈಗ ಹಿಸ್ಸಾ ನಂಬರ 1 ಎಂದು ಆಗಿದೆ ಎಂದರೆ ಸರಿ, ಅದು ಹರ್ಜು ರಾಮ ಸಿಂಗ ಅವರ ಹೆಸರಿಗೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಫಾರಂ ನಂಬರ 10 ರಲ್ಲಿ ಹಿಸ್ಸಾ ನಂಬರ 5 ಇದ್ದು ಅದು ಈಗ ಹಿಸ್ಸಾ ನಂಬರ 2 ಎಂದು ಆಗಿದೆ ಎಂದರೆ ಸರಿ, ಅದು ರೇವೆ ರಾಮಸಿಂಗರವರ ಹೆಸರಿಗೆ ಪಹಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಫಾರಂ ನಂಬರ 10 ರಲ್ಲಿ ಹಿಸ್ಸಾ ನಂಬರ 3 ಇದ್ದು ಅದು ಈಗ ಹಿಸ್ಸಾ ನಂಬರ 8 ಎಂದು ಆಗಿದೆ ಎಂದರೆ ಸರಿ, ಅದು ತುಳಜಾನಾಯಕರವರ ಹೆಸರಿಗೆ ಪಹಣಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಹಿಸ್ಸಾ ನಂಬರ 7 ಹಣುಮು ಸಕ್ರುರವರ ಹೆಸರಿಗೆ ಆಗಿದೆ ಎಂದರೆ ಸರಿ. ಸರ್ವೆ ನಂಬರ 90/1 ರಲ್ಲಿ ಪಹಣಿ ಗಂಗು ತಂದೆ ಸಕ್ರುರವರ ಹೆಸರಿಗೆ ಇತ್ತು ಎಂದರೆ ಇರಬಹುದು ಎಂದು ಹೇಳುತ್ತಾರೆ. ಸರ್ವೆ ನಂಬರ 90/1 ರಲ್ಲಿ ಒಟ್ಟು 4 ಎಕರೆ 4 ಗುಂಟೆ ಜಮೀನಿನಲ್ಲಿ 3 ಎಕರೆ ಜಮೀನನ್ನು ಭೀಮಣ್ಣ ತಂದೆ ಬಸ್ಸಪ್ಪ ಎಂಬುವವರಿಗೆ ಗಂಗು ತಂದೆ ಸಕ್ರು ಮಾರಾಟ ಮಾಡಿದರು ಎಂದರೆ ಸರಿ. 3 ಎಕರೆ ಜಮೀನು ಮಾರಾಟ ಮಾಡಿದ್ದರು ಸಹ ಪಹಣಿಯಲ್ಲಿ 4 ಎಕರೆ 4 ಗುಂಟೆ ಎಂದು ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 90/10 ರಲ್ಲಿ 1 ಎಕರೆ ಜಮೀನು ಗಂಗು ತಂದೆ ಸಕ್ರುರವರು ಪಾಂಡುರಂಗ ತಂದೆ ಮಾಣಯ್ಯ ಎಂಬುವವರಿಗೆ 1970 ರಲ್ಲಿ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 90 ರಲ್ಲಿ ಒಟ್ಟು 14 ಹಿಸ್ಸೆ ಆಗಿದ್ದು ಆದರೆ ಪಹಣಿಗಳು ಅಷ್ಟು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 90/3, 90/4,90/6 ಸರಕಾರದವರು ತೆಗೆದುಕೊಂಡಿದ್ದು ಈಗ ಸರಕಾರದ ಹೆಸರಿನಲ್ಲಿ ಇದೆ ಎಂದರೆ ಸರಿ. ಇದರಲ್ಲಿ ಸರಕಾರದವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ

ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 90/6 ನನ್ನ ಸ್ವಾಧೀನದಲ್ಲಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ 90/6 ಮುಳುಗಡೆ ಆಗದಿದ್ದರು ಸಹ ನಾನು ಪರಿಹಾರದ ಹಣ ಪಡೆದುಕೊಂಡೆ ಎಂದರೆ ಸಾಕ್ಷಿ ನಾನು ಅದನ್ನು ತಪ್ಪಾಗಿ ತೆಗೆದುಕೊಂಡೆ ಎಂದು ಹೇಳುತ್ತಾರೆ. ಆ ಹಣವನ್ನು ನಾನು ತಪ್ಪಾಗಿ ತೆಗೆದುಕೊಂಡಿದ್ದೆ ಎಂದು ನನಗೆ ಗೊತ್ತಾರಿಗೆ 3-4 ವರ್ಷ ಆಗಿರುತ್ತದೆ. ಆ ಹಣ ನನ್ನದಲ್ಲ ಎಂದು ಸರಕಾರಕ್ಕೆ ವಾಪಸ್ಸು ಕೊಟ್ಟಿಲ್ಲ. ಸರ್ವೆ ನಂಬರ 90 ಬಗ್ಗ 4-5 ದಾವೆಗಳು ನಡೆದಿವೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 18/2010 ದಾವೆ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ 18/2010 ರಲ್ಲಿ ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪ ಸರ್ವೆ ನಂಬರ 90/4 ಅವರ ಜಮೀನು ಎಂದು ತಮ್ಮ ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 90/4 ರಲ್ಲಿ ನನ್ನ ಚಿಕ್ಕಪ್ಪ ಶಂಕರವರದು 2 ಎಕರೆ 3 ಗುಂಟೆ ಜಮೀನು ಇದೆ ಎಂದು ನ್ಯಾಯಾಲಯದಿಂದ ತೀರ್ಪು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 90 ರಲ್ಲಿ 3 ಎಕರೆ 1 ಗುಂಟೆ ಜಮೀನಿನ ಬಗ್ಗೆ ರೇಖು ಮತ್ತು ಚಂಗುರವರು ಅಸಲು ದಾವೆ ಸಂಖ್ಯೆ 17/2010 ದಾವೆ ಸಲ್ಲಿಸಿದ್ದರು ಎಂದರೆ ಸರಿ. ಅಸಲು ದಾವೆ ಸಂಖ್ಯೆ 17/2010 ಡಿಕ್ರಿ ಆಗಿದ್ದು ಅದನ್ನು ಶಂಕರವರು ಪ್ರಶ್ನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಮೇಲ್ಮನವಿಯನ್ನು ಸರ್ವೆ ನಂಬರ 90 ರಲ್ಲಿ 3 ಎಕರೆ 1 ಗುಂಟೆ ಜಮೀನು ಶಂಕರ ಮತ್ತು ಅವರ ಕುಟುಂಬಕ್ಕೆ ಸಂಬಂಧ ಪಟ್ಟಿದ್ದು ಎಂದು ಆದೇಶ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಹಾಗೂ ಶಂಕರವರಿಗೆ ಸರ್ವೆ ನಂಬರ 90 ರಲ್ಲಿ ಬಂದ ಜಮೀನಿನಲ್ಲಿ 9 ಗುಂಟೆ ಜಮೀನು ರಸ್ತೆಗಾಗಿ ವಿಲಿನ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 90/3 ಕ್ಕೆ ಸಂಬಂಧಿಸಿದಂತೆ

ರೂ.27,43,985/- ನನ್ನ ಚಿಕ್ಕಪ್ಪ ಶಂಕರವರಿಗೆ ಬಂದಿತ್ತು. ಸರ್ವೆ ನಂಬರ 90/3 ಕ್ಕೆ ಬಂದ ಪರಿಹಾರದ ಹಣಾ ಶಂಕರವರು ತೆಗೆದುಕೊಂಡರು ಮತ್ತು ಸರ್ವೆ ನಂಬರ 90/4 ಕ್ಕೆ ಬಂದ ಪರಿಹಾರದ ಹಣಾ ನಾನು ತೆಗೆದುಕೊಂಡೆ ಎಂದರೆ ಸರಿ. ಸರ್ವೆ ನಂಬರ 90/6 ರಲ್ಲಿ 04 ಎಕರೆ 04 ಗುಂಟೆ ಇದೆ ಎಂದರೆ ಸಾಕ್ಷಿ 03 ಎಕರೆ 01 ಗುಂಟೆ ಇದೆ ಎಂದು ಹೇಳುತ್ತಾರೆ. ಸರ್ವೆ ನಂಬರ 90/6 ರಲ್ಲಿ 04 ಎಕರೆ 04 ಗುಂಟೆ ಜಮೀನಿನ ಪೈಕಿ 03 ಎಕರೆ 01 ಗುಂಟೆ ಜಮೀನಿನ ನೋಟಿಫಿಕೇಷನ 01 ರಿಂದ 03 ನೇ ಪ್ರತಿವಾದಿಯ ಹೆಸರಿಗೆ ಆಗಿದೆ ಎಂದರೆ ಸಾಕ್ಷಿ ಜಮೀನು 3 ಎಕರೆ ಇದೆ ಎಂದು ಹೇಳುತ್ತಾರೆ. ಅಸಲು ದಾವೆ ಸಂಖ್ಯೆ 18/2010 ರಲ್ಲಿ ಈ ದಾವೆಯ 04 ನೇ ಪ್ರತಿವಾದಿಯು ಫಾರಂ ನಂಬರ 10 ತಪ್ಪು ಇರುತ್ತದೆ ಪಹಣಿಗಳು ಸರಿ ಇರುತ್ತವೆ ಎಂದು ಸಾಕ್ಷ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸ್ವಾಧೀನದಲ್ಲಿದ್ದೇನೆ ಎಂದು ಹೇಳುತ್ತಾರೆ. ಸರ್ವೆ ನಂಬರ 90/6 ರಲ್ಲಿ ಇರುವ ಜಮೀನು ಸರಕಾರಕ್ಕೆ ಮುಳುಗಡೆ ಆಗಿದೆ ಎಂದರೆ ಸರಿ. ಈಗ ಸದರಿ ಜಮೀನಿನ ಮಾಲಿಕರ ಸರಕಾರ ಎಂದರೆ ಸರಿ. ಸರ್ವೆ ನಂಬರ 90/6 ರಲ್ಲಿ 04 ಎಕರೆ 04 ಗುಂಟೆ ಜಮೀನಿನ ಪೈಕಿ 03 ಎಕರೆ 01 ಗುಂಟೆ ಜಮೀನಿನ ನೋಟಿಫಿಕೇಷನ 01 ರಿಂದ 03 ನೇ ಪ್ರತಿವಾದಿಯ ಹೆಸರಿಗೆ ಆಗಿದೆ ಎಂದರೆ ಸಾಕ್ಷಿ ಆಗಿದೆ ಆದರೆ ಅದು ತಪ್ಪು ಇದೆ ಎಂದು ಹೇಳುತ್ತಾರೆ. ಸರ್ವೆ ನಂಬರ 90/6 ರಲ್ಲಿ 04 ಎಕರೆ 04 ಗುಂಟೆ ಜಮೀನಿನು ಇದೆ ಎಂದರೆ ಸಾಕ್ಷಿ 03 ಎಕರೆ 01 ಗುಂಟೆ ಜಮೀನು ಇದೆ ಎಂದು ಹೇಳುತ್ತಾರೆ. ಅಸಲು ದಾವೆ ಸಂಖ್ಯೆ 18/2010 ರಲ್ಲಿ ಈ ದಾವೆಯ 04 ನೇ ಪ್ರತಿವಾದಿಯು ತಮ್ಮ ಸಾಕ್ಷದಲ್ಲಿ ಸರ್ವೆ ನಂಬರ 90/1 ಇದ್ದು ಹೊಸ ಫಾರಂ ನಂಬರ 10 ರ ಪ್ರಕಾರ 90/6 ಇದೆ ಎಂದು ಸಾಕ್ಷಿ ಕೊಟ್ಟಿರುತ್ತಾರೆ

ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 90/3 ,90/4 ಮತ್ತು 90/6 ಈಗಾಗಲೇ ಮುಳುಗಡೆ ಆಗಿದ್ದರಿಂದ ನಮಗೆ ಅದರಲ್ಲಿ ಯಾರುದೆ ಹಕ್ಕು ಇಲ್ಲ ಎಂದರೆ ಸಾಕ್ಷಿ ಹಣ ಕೊಟ್ಟರೆ ನಾನು ಬಿಟ್ಟು ಬಿಡುತ್ತೇನ ಎಂದು ಹೇಳುತ್ತಾರೆ. ಸರ್ವೆ ನಂಬರ 90/6 ರಲ್ಲಿ 04 ಎಕರೆ 04 ಗುಂಟೆ ಜಮೀನಿನ ಪೈಕಿ 03 ಎಕರೆ 01 ಗುಂಟೆ ಜಮೀನಿನ ಹಕ್ಕುದಾರರು ರಾಜು ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದರಲ್ಲಿ 2 ಬೋರವೆಲ ಹಾಕಿಸಿರುತ್ತೇನ ಎಂದು ಹೇಳುತ್ತಾರೆ. ರಾಜುನಾಯಕ ಮತ್ತು ಅವರ ಕುಟುಂಬಕ್ಕೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗು ಮತ್ತು ನನಗೊ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣಕ್ಕೆ ರಾಜು ನಾಯಕ್ಕೆ ಹಕ್ಕುದಾರ ಎಂದರೆ ಸರಿಯಲ್ಲ. ಸರ್ವೆ ನಂಬರ 90 ರಲ್ಲಿ ಸಕ್ರು ನಾಯಕರವರ ಎಲ್ಲಾ ಮಕ್ಕಳಿಗೆ ಪಾಲು ಬಂದಿತ್ತು ಎಂದರೆ ಸರಿ. ಗಂಗುನಾಯಕರವರ ಹೆಸರಿಗೆ ಬಂದ ಜಮೀನು ಈಗ ಇರುತ್ತದೆ. ಗಂಗುನಾಯಕರವರ ಹೆಸರಿಗೆ ಬಂದ ಜಮೀನು ಈಗ ಪಹಣಿ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಗಂಗುನಾಯಕರವರ ತಮ್ಮ ಜಮೀನನ್ನು ಭೀಮಣ್ಣರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗಂಗುನಾಯಕರವರ ತಮ್ಮ ಜಮೀನನ್ನು ಭೀಮಣ್ಣರವರಿಗೆ ಮಾರಾಟ ಮಾಡಿದ ಜಮೀನನ್ನು ಮತ್ತೆ ಭೀಮಣ್ಣರವರು ಆ ಜಮೀನನ್ನು ಪ್ರತಿವಾದಿ 1 ರಿಂದ 4 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಗೂ04 ನೇ ಪ್ರತಿವಾದಿಯ ಮೊಸ ಮಾಡುವ ಉದ್ದೇಶದಿಂದ ಸರಕಾರದವರನ್ನುಪಕ್ಷಗಾರರನ್ನಾಗಿ ಮಾಡದೆ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರತಿವಾದಿ 01 ರಿಂದ 03 ರವರ ಜಮೀನು ಇದೆ ಎಂದು

ಗೊತ್ತಿದ್ದರು ಸಹ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**04 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.